**ಪಿಡಬ್ಲೂ.2: B. Nagaraja.,**

**ದಿನಾಂಕಃ 20.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಪಿರ್ಯಾದುದಾರರು ನನ್ನ ಸಹೋದರಿ. ಪಿರ್ಯಾದುದಾರರು ಚಾಮರಾಜಪೇಟೆಯಲ್ಲಿ ವಾಸವಾಗಿರುತ್ತಾರೆ. ನಾನು ಪಿರ್ಯಾದುದಾರರ ಮನೆಯಿಂದ ಸುಮಾರು 2-3 ಕಿಲೋಮಿಟರ್ ಅಂತರದಲ್ಲಿ ವಾಸವಾಗಿರುತ್ತೇನೆ. ದಿ.05.06.2017 ರಂದು ನಾನು ನಮ್ಮ ಅಕ್ಕನ ಮನೆಯಲ್ಲಿ ವಾಸವಾಗಿದ್ದೆನು. ನಮ್ಮ ಅಕ್ಕನ ಮನೆಯಲ್ಲಿ ನಾನು, ನನ್ನ ಅಕ್ಕ-ಬಾವ ವಾಸವಾಗಿದ್ದೆವು. ದಿ.05.06.2017 ರಂದು ಮತ್ತು ದಿ.10.08.2017 ರಂದು ನೀವು ನಿಮ್ಮ ಅಕ್ಕನ ಮನೆಯಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಏತಕ್ಕಾಗಿ ಆ ದಿನಾಂಕದಂದು ನಿಮ್ಮ ಅಕ್ಕನ ಮನೆಗೆ ಹೋಗಿದ್ದೀರಿ ಎಂದರೆ ಸಾಕ್ಷಿಯು ನನ್ನ ಅಕ್ಕ-ಬಾವನಿಗೆ ವಯಸ್ಸಾಗಿದ್ದ ಕಾರಣ ಅವರನ್ನು ವಿಚಾರಿಸಿಕೊಳ್ಳಲು ಅವರ ಮನೆಗೆ ಹೋಗಿದ್ದೆನು ಎಂದು ನುಡಿಯುತ್ತಾರೆ. ನಾನು ಆ ದಿನ ನಮ್ಮ ಅಕ್ಕನ ಮನೆಯಲ್ಲಿದ್ದಾಗ ಆರೋಪಿ ಬಂದಿದ್ದರು, ನಾನು ಆನ್ ಡಿಮಾಂಡ್ ಪ್ರೊನೋಟಿಗೆ ಸಹಿ ಮಾಡಿದೆ. ಆ ದಿನ ಆರೋಪಿ ನಿಮ್ಮ ಅಕ್ಕನ ಮನೆಗೆ ಬಂದಿರಲಿಲ್ಲ ಹಾಗೂ ನೀವು ಯಾವುದೇ ದಾಖಲೆಗೆ ಸಹಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಪಿರ್ಯಾದುದಾರರಿಗೆ ರೂ.5,50,000/- ಗಳನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರು ಒಂದೇ ದಿನ ರೂ.5,50,000/- ಗಳನ್ನು ನೀಡಿದ್ದರೇ ಎಂದರೆ ಸಾಕ್ಷಿಯು ದಿ.05.06.2017 ರಂದು ರೂ.5,00,000/-ಗಳನ್ನು ಹಾಗೂ ಉಳಿಕೆ ರೂ.50,000/- ಗಳನ್ನು ದಿ.10.08.2017 ರಂದು ನೀಡಿದರು ಎಂದು ನುಡಿಯುತ್ತಾರೆ. 100/- ರೂ. ಮುಖಬೆಲೆಯ ನೋಟುಗಳನ್ನು

**ಪಿಡಬ್ಲೂ.2: B. Nagaraja.,**

ನೀಡಿದರು. ಆ ದಿನ ಯಾವುದೇ ರೀತಿ ಹಣಕಾಸಿನ ವ್ಯವಹಾರವಾಗದಿದ್ದರೂ ಸಹ ನೀವು ಹಾಗೂ ನಿಮ್ಮ ಸಹೋದರಿ ಪಿರ್ಯಾದುದಾರರು ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ ಎಂದಿಗೂ ಸಹ ನಿಮ್ಮ ಮುಂದೆಯಾಗಲೀ, ನಿಮ್ಮ ಸಹೋದರಿ ಮುಂದೆಯಾಗಲೀ ಆನ್ ಡಿಮಾಂಡ್ ಪ್ರೊನೋಟೀಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.